“ಇಲ್ಲ ಅನ್ನಬೇಡ ಮಗಾ, ಪ್ಲೀಸ್.”

“ನಿಜವಾಗಲೂ ನಿನಗೆ ಮತ್ತು ನೆತ್ತಿಗೇರಿದೆ.” ಡ್ರಿಯೋಲಿಯ ನಶೆ ತುಂಬಿದ ಕಣ್ಣುಗಳೊಳಗೆ ಇಣುಕುವ ಪ್ರಯತ್ನ ಮಾಡುತ್ತಾ ಹುಡುಗ, “ನಿನ್ನ ಉದ್ದೇಶವಾದರೂ ಏನು?” ಎಂದ.

“ನಾನು ಕುಡಿದು ಮಾತನಾಡುತ್ತಿದ್ದೇನೆ ಎಂದು ತಿಳಿದುಕೊಳ್ಳಬೇಡ ಹುಡುಗ. ನಾನು ಸೀರಿಯಸ್ ಆಗಿಯೇ ಹೇಳುತ್ತಿದ್ದೇನೆ. ನಾನು ಕೇಳಿದ್ದು ನೀನು ಖಂಡಿತ ಮಾಡಬಹುದು.”

“ಅಂದರೆ ಟ್ಯಾಟೂ?”

“ಹೂಂ, ಟ್ಯಾಟೂ. ಅದನ್ನು ನಿನಗೆ ಎರಡೇ ನಿಮಿಷಗಳಲ್ಲಿ ಕಲಿಸಬಲ್ಲೆ!”

“ಸಾಧ್ಯನೇ ಇಲ್ಲ!”

“ಅಂದರೆ, ನಾನು ಏನು ಮಾತನಾಡುತ್ತಿದ್ದೇನೆಂಬುದು ನನಗೇ ಅರ್ಥವಾಗುತ್ತಿಲ್ಲ ಎಂದು ನೀನು ಭಾವಿಸುತ್ತಿದ್ದೀಯಾ ಅಲ್ಲಾ?”

ಅದು ಖಂಡಿತವಾಗಿಯೂ ಹುಡುಗನ ಅಭಿಪ್ರಾಯವಾಗಿರಲಿಲ್ಲ. ಯಾರಾದರೂ ಟ್ಯಾಟೂ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲವರಾಗಿದ್ದರೆ ಅದು ಖಂಡಿತವಾಗಿ ಡ್ರಿಯೋಲಿಯೇ ಎಂದು ಅವನು ಚೆನ್ನಾಗಿ ಅರಿತಿದ್ದ. ಕಳೆದ ತಿಂಗಳಷ್ಟೇ ಹುಡುಗ ಡ್ರಿಯೋಲಿ ಗಿರಾಕಿಯೊಬ್ಬನ ಹೊಟ್ಟೆಯ ಮೇಲೆ ನಾಜೂಕಾಗಿ ಒಂದು ಹೂವಿನ ಚಿತ್ರದ ಹಚ್ಚೆ ಹುಯ್ದಿದ್ದನ್ನು ಕಣ್ಣಾರೆ ನೋಡಿದ್ದ. ಮತ್ತೊಬ್ಬನ ದಟ್ಟ ಕೂದಲಿನ ಎದೆಯ ಮೇಲೆ ಕರಡಿಯ ಹಚ್ಚೆ ಹುಯ್ದು ಆ ಕೂದಲುಗಳನ್ನೇ ಕಲಾತ್ಮಕವಾಗಿ ಬಳಸಿಕೊಂಡಿದ್ದ. ಡ್ರಿಯೋಲಿ ಕೂಡ ಒಬ್ಬ ಅಸಾಮಾನ್ಯ ಕಲಾಕಾರನಾಗಿದ್ದ. ಡ್ರಿಯೋಲಿ ಒಬ್ಬನ ತೋಳಿನ ಮೇಲೆ ಒಂದು ಹುಡುಗಿಯ ಹಚ್ಚೆ ಹುಯ್ದಿದನ್ನು ಹುಡುಗ ನೋಡಿದ್ದ. ಅವನು ತೋಳು ಮಡಚಿದಾಗ ಹುಡುಗಿ ಜೀವ ತಳೆದಂತೆ ಕಾಣಿಸುತ್ತಿದ್ದುದನ್ನು ನೋಡಿ ಆಶ್ಚರ್ಯಪಟ್ಟಿದ್ದ.

‘‘ನಾನು ಏನು ಹೇಳುತ್ತಿದ್ದೀನೆಂದರೆ, ನೀನು ನಶೆಯಲ್ಲಿದ್ದು ಮಾತನಾಡುತ್ತಿದ್ದೀಯ.”

“ಜೋಸಿ ನಿನ್ನ ರೂಪದರ್ಶಿಯಾಗಲಿ. ಅವಳ ಚಿತ್ರ ನನ್ನ ಬೆನ್ನ ಮೇಲೆ ಬಿಡಿಸು. ನನ್ನ ಮಡದಿಯ

